ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/134/ಇಎಸ್‌ಟಿ(8)ಬಿ/ವೈವೆ/2018

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 16.02.2019.

**ಸುತ್ತೋಲೆ**

ವಿಷಯ: ವೈದ್ಯಕೀಯ ವೆಚ್ಚ ಮರುಪಾವತಿಯ ಬಿಲ್ಲುಗಳನ್ನು ಮೇಲುರುಜುವಿಗಾಗಿ ಸಲ್ಲಿಸುವಾಗ ಅನುಸರಿಸಬೇಕಾದ ಕ್ರಮದ ಬಗ್ಗೆ.

*****

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಟ್ಟಿರುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ/ಸರ್ಕಾರಿ ಪಾಲಿಟೆಕ್ನಿಕ್‌ಗಳ/ಕಿರಿಯ ತಾಂತ್ರಿಕ ಶಾಲೆಗಳ/ಸರ್ಕಾರಿ ಗಣಿ ಶಿಕ್ಷಣ ಶಾಲೆಯ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ವೈದ್ಯಕೀಯ ವೆಚ್ಚ ಮರುಪಾವತಿ ಮಂಜೂರಾತಿಗಾಗಿ ನಿರ್ದೇಶನಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತಾವನೆಗಳಲ್ಲಿ ಈ ಕೆಳಕಂಡ ಬಹುಮುಖ್ಯವಾದ ದಾಖಲೆಗಳನ್ನು ಒದಗಿಸದೆ ಇರುವುದರಿಂದ ಬಿಲ್ಲುಗಳನ್ನು ಪುನ: ಹಿಂದಿರುಗಿಸಬೇಕಾಗಿರುತ್ತದೆ. ಆದ್ದರಿಂದ ಈ ಕೆಳಕಂಡ ಸೂಚನೆಗಳನ್ನು ತಪ್ಪದೇ ಪಾಲಿಸಲು ಸೂಚಿಸಲಾಗಿದೆ.

1. ನಮೂನೆ 'ಸಿ' ಮತ್ತು 'ಬಿ'ಯನ್ನು ಸಮರ್ಪಕವಾಗಿ ಭರ್ತಿ ಮಾಡುವುದು.
2. ನಮೂನೆ 'ಬಿ'ಯಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿಯ ಸಹಿ, ಹೆಸರು, ಹುದ್ದೆ, ಮಾನ್ಯತೆ ಪಡೆದಿರುವ ಆಸ್ಪತ್ರೆಯ ಸೀಲು ಕಡ್ಡಾಯವಾಗಿ ಇರತಕ್ಕದ್ದು.
3. ಒಳರೋಗಿಯಾಗಿ ಪಡೆದ ಚಿಕಿತ್ಸೆಗೆ ಬಿಡುಗಡೆ ಸಾರಾಂಶ (ಡಿಸ್ಚಾರ್ಜ್ ಸಮ್ಮರಿ) ಮತ್ತು ಹೊರರೋಗಿಯಾಗಿ ಪಡೆದ ಚಿಕಿತ್ಸೆಗೆ ಚಿಕಿತ್ಸೆಯ ವಿವರ (ಡಯಾಗ್ನೋಸ್ಟಿಕ್ ಶೀಟ್) ಸಲ್ಲಿಸಬೇಕು.
4. ವೈದ್ಯಕೀಯ ವೆಚ್ಚ ಪ್ರಸ್ತಾವನೆಗಳಲ್ಲಿ ಚಿಕಿತ್ಸೆ ಪಡೆದಿರುವ ಆಸ್ಪತ್ರೆಯು ಸರ್ಕಾರದಿಂದ ಮಾನ್ಯತೆ ಪಡೆದಿರುವ ಅಧಿಸೂಚನೆಯ ಸಂಖ್ಯೆ ಮತ್ತು ದಿನಾಂಕವನ್ನು ತಪ್ಪದೇ ನಮೂದಿಸುವುದು. ತುರ್ತು ಸಂದರ್ಭದಲ್ಲಿ ಸರ್ಕಾರದಿಂದ ಮಾನ್ಯತೆ ಪಡೆಯದಿರುವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಲ್ಲಿ ಅದಕ್ಕೆ ತುರ್ತು ಸಂದರ್ಭದ ವಿವರಣೆಯೊಂದಿಗೆ ಸಲ್ಲಿಸತಕ್ಕದ್ದು.
5. ಪ್ರಸ್ತಾವನೆಯನ್ನು CGHS Rules & Rates ಅನ್ವಯ ಪರಿಶೀಲಿಸಿ, ನಕಲು ಪ್ರತಿಯಲ್ಲಿ ಎಷ್ಟು ಮೊತ್ತಕ್ಕೆ ಮೇಲುರುಜು ಮಾಡಬೇಕೆಂಬುದನ್ನು ನಮೂದಿಸತಕ್ಕದ್ದು, ಇಲ್ಲದಿದ್ದಲ್ಲಿ ಪ್ರಸ್ತಾವನೆಯನ್ನು ಯಥಾವತ್ತಾಗಿ ಹಿಂದಿರುಗಿಸಲಾಗುವುದು.
6. ಪ್ರಿಸ್ಕ್ರಿಪ್ಷನ್ ನಲ್ಲಿ ನಮೂದಿಸಿರುವ ಔಷಧಿಯ ಸಂಖ್ಯೆಗೂ (quantity) ಹಾಗೂ ಖರೀದಿಸಿರುವ ಔಷಧಿಗೂ ಹೊಂದಾಣಿಕೆ ಬಗ್ಗೆ ಪರಿಶೀಲಿಸಿ, ವ್ಯತ್ಯಾಸ ಕಂಡುಬಂದಲ್ಲಿ ತಮ್ಮ ಹಂತದಲ್ಲಿಯೇ ಹಿಂಬರಹ ನೀಡಿ ಪ್ರಸ್ತಾವನೆಯನ್ನು ಹಿಂದಿರುಗಿಸುವುದು.
7. ಕನ್ನಡಕ ಖರೀದಿಸಿದ ವೈದ್ಯಕೀಯ ವೆಚ್ಚ ಮರುಪಾವತಿಗೆ ಅರ್ಜಿಯೊಂದಿಗೆ ನಮೂನೆ-ಡಿ ಯನ್ನು ಕಡ್ಡಾಯವಾಗಿ ಸಲ್ಲಿಸುವುದು.
8. ಕ್ಲೇಮು ಮಾಡಿರುವ ಒಟ್ಟು ಮೊತ್ತದ ಪಟ್ಟಿಯನ್ನು (ಕ್ರಮಸಂಖ್ಯೆ, ಬಿಲ್ಲಿನ ದಿನಾಂಕ, ಬಿಲ್ಲಿನ ಸಂಖ್ಯೆ, ಒಟ್ಟು ಮೊತ್ತ) ಕಡ್ಡಾಯವಾಗಿ ಸಲ್ಲಿಸುವುದು.
9. ಚಿಕಿತ್ಸಾ ಅವಧಿ ಹಾಗೂ ಖಾಯಿಲೆಯ ವಿವರಗಳನ್ನೊಳಗೊಂಡ ವೈದ್ಯಾಧಿಕಾರಿಗಳ ಪ್ರಿಸ್ಕ್ರಿಪ್ಷನ್ ಅನ್ನು ಕಡ್ಡಾಯವಾಗಿ ಬಿಲ್ಲಿಗೆ ಲಗತ್ತಿಸುವುದು.

.....2

10. ಕ್ಲೇಮು ಮಾಡಿರುವ ವೆಚ್ಚವನ್ನು ಬೇರೆ ಯಾವುದೇ ಮೆಡಿಕಲ್ ಇನ್ಸೂರೆನ್ಸ್ ಕಂಪನಿಗಳಲ್ಲಿ ಕ್ಲೇಮು ಮಾಡಬಾರದು ಹಾಗೂ ಈ ಬಗ್ಗೆ ದೃಢೀಕರಣವನ್ನು ಕಡ್ಡಾಯವಾಗಿ ಸಲ್ಲಿಸುವುದು. ತಮ್ಮ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ ಮನವಿಯ ಮೂಲ ಪ್ರತಿಯನ್ನು ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು ಹಾಗೂ ಮನವಿಯಲ್ಲಿ ಮನವಿ ದಿನಾಂಕವನ್ನು ನಮೂದಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
11. ಸರ್ಕಾರಿ ನೌಕರರ ಅವಲಂಬಿತರ ವೈದ್ಯಕೀಯ ವೆಚ್ಚ ಮರುಪಾವತಿ ಪಡೆಯಲು ಅವರ ಆದಾಯ ಪ್ರಮಾಣಪತ್ರವನ್ನು ತಹಶೀಲ್ದಾರರಿಂದ ಪಡೆದು ಸಲ್ಲಿಸಬೇಕು ಹಾಗೂ ಜೊತೆಯಲ್ಲಿ ವಾಸಿಸುತ್ತಿರುವ ಬಗ್ಗೆ ದೃಢೀಕರಣವನ್ನು ಸಲ್ಲಿಸಬೇಕು.
12. ಸರ್ಕಾರಿ ನೌಕರರ ಪತಿ/ಪತ್ನಿ ಇಬ್ಬರೂ ನೌಕರರಾಗಿದ್ದ ಪಕ್ಷದಲ್ಲಿ ಪತಿ/ಪತ್ನಿ ತಾವು ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ/ಅರೆಸರ್ಕಾರಿ/ಖಾಸಗಿ ಸಂಸ್ಥೆಗಳಿಂದ ವೈದ್ಯಕೀಯ ವೆಚ್ಚ ಮರುಪಾವತಿ ಪಡೆದಿಲ್ಲವೆಂಬ ಬಗ್ಗೆ ದೃಢೀಕರಣ ಪಡೆದು ಬಿಲ್ಲಿಗೆ ಲಗತ್ತಿಸುವುದು.
13. ನಿರಂತರ ಚಿಕಿತ್ಸೆ ಪಡೆಯುವವರು ಚಿಕಿತ್ಸೆ ಪಡೆಯುತ್ತಿರುವ ದಿನಾಂಕದಿಂದ ಹಾಗೂ ಒಳರೋಗಿಯಾಗಿ ಚಿಕಿತ್ಸೆ ಪಡೆದವರು ಆರು ತಿಂಗಳೊಳಗಾಗಿ ಬಿಲ್ಲುಗಳನ್ನು ಮರುಪಾವತಿಗಾಗಿ ಸಲ್ಲಿಸುವುದು. ಅವಧಿ ಮೀರಿ ಸಲ್ಲಿಸಿದ ಪ್ರಸ್ತಾವನೆಗಳಿಗೆ ಪ್ರಾಚಾರ್ಯರ ಹಂತದಲ್ಲಿಯೇ ಹಿಂದಿರುಗಿಸುವುದು.
14. ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಸಿ ಮತ್ತು ಡಿ ಸಮೂಹದ ನೌಕರರಿಗೆ ಆಯಾ ಸಂಸ್ಥೆಯ ಪ್ರಾಚಾರ್ಯರೇ ಮಂಜೂರಾತಿ ಪ್ರಾಧಿಕಾರಿಯಾಗಿರುವುದರಿಂದ ಪ್ರಾಚಾರ್ಯರ ಹಂತ ದಲ್ಲಿಯೇ ಮಂಜೂರಾತಿ ನೀಡತಕ್ಕದ್ದು.
15. ಸಂದೇಹಾತ್ಮಕ ಬಿಲ್ಲುಗಳ ಬಗ್ಗೆ ಆಯಾ ಜಿಲ್ಲಾ ಶಸ್ತ್ರಚಿಕಿತ್ಸಕರು/ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅವರಿಗೆ ಬಿಲ್ಲು ಕಳುಹಿಸಿ ಸ್ಪಷ್ಟೀಕರಣ ಪಡೆದ ನಂತರ ಸಲ್ಲಿಸತಕ್ಕದ್ದು. ಸಂದೇಹಾತ್ಮಕ/ನಕಲಿ ಬಿಲ್ಲುಗಳನ್ನು ಸಲ್ಲಿಸಿದ್ದಲ್ಲಿ ನಿಯಮಾನುಸಾರ ಅಂತಹವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಮೇಲ್ಕಂಡ ಸೂಚನೆಗಳನ್ನು ಪಾಲಿಸದೇ ಕಳುಹಿಸಿದ ಬಿಲ್ಲುಗಳ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳದೇ ಹಿಂದಿರುಗಿಸಲಾಗುವುದು. ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದ ನಂತರ ಅರ್ಹತೆ ಇದ್ದಲ್ಲಿ ಮಾತ್ರ 'ಎ' ಮತ್ತು 'ಬಿ' ಸಮೂಹದ ಅಧಿಕಾರಿಗಳ ಬಿಲ್ಲುಗಳನ್ನು ನಿರ್ದೇಶನಾಲಯದಲ್ಲಿ ಮೇಲುಸಹಿಗಾಗಿ ಕಳುಹಿಸ ತಕ್ಕದ್ದು. ಪ್ರಸ್ತಾವನೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ನಂತರ ಅರ್ಹತೆಯಿಲ್ಲದ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ತಮ್ಮ ಹಂತದಲ್ಲಿಯೇ ತಿರಸ್ಕರಿಸಲು ಮತ್ತೊಮ್ಮೆ ಎಲ್ಲಾ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.

ನಿರ್ದೇಶಕರು.

ಇವರಿಗೆ:-

ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ, ಸರ್ಕಾರಿ ಪಾಲಿಟೆಕ್ನಿಕ್‌ಗಳ/ಕಿರಿಯ ತಾಂತ್ರಿಕ ಶಾಲೆಗಳ/ಸರ್ಕಾರಿ ಗಣಿ ಶಿಕ್ಷಣ ಶಾಲೆ ಪ್ರಾಚಾರ್ಯರುಗಳಿಗೆ ಮೇಲಿನ ಆದೇಶಗಳನ್ನು ನಿಮ್ಮ ಸಂಸ್ಥೆಯ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಯವರ ಗಮನಕ್ಕೆ ತರಲು ಸೂಚಿಸಿದೆ.